ಇ) ಈ ಸಾಗುವಳಿದಾರರನ್ನು ಸರ್ಕಾರ ಈಗ ಕೈ ಬಿಡಿಸಿರಲು ಕಾರಣವೇನು ?

ಈ) ಸರ್ಕಾರ ಮತ್ತೆ ಯಾವ ಜಾಗದಲ್ಲಿ ಈ ಮೇಲ್ಕಂಡ ಸಾಗುವಳಿದಾರರಿಗೆ ಸಾಗುವಳಿ ಮಾಡಲು ಜಮೀನು ಮಂಜೂರು ಮಾಡುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಎರಡು ಎಕರೆ

ಆ) ಶ್ರೀ ಚಿಕ್ಕನರಸಯ್ಯ, ಬಿನ್ ಕೆಂಪನರಸಯ್ಯ ಎಂಬುವವರು ಸುಮಾರು 25 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ.

ಇ) ಸರದಿ ಜಮೀನು ಹಿಡುವಳಿ ಜಮೀನು ಆಗಿರುವುದರಿಂದ ಇವರನ್ನು ಖುಲ್ಲಾ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವದಿಲ್ಲ.

ರಾಜ್ಯದಲ್ಲಿ ತೆಂಗಿನ ಬೆಳೆಗೆ ತಗುಲಿರುವ ರೋಗ ತಡೆಯಲು ತೆಗೆದುಕೊಂಡ ಕ್ರಮಗಳು

341 (941): ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತೆಂಗು ಬೆಳೆಗೆ ರೋಗ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಮಂತ್ರಿಗಳು):–

ಅ) ಹೌದು

ಆ) ತೆಂಗಿನ ಬೆಳೆಗೆ ಕರ್ನಾಟಕ ರಾಜ್ಯದಲ್ಲಿ ರೋಗ ಯಾವುದೂ ತೀವ್ರವಾಗಿರುವುದಿಲ್ಲ. ಆದರೆ ಕಪ್ಪುತಲೆ ಹುಳುವಿನ ಭಾವೆ ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ತುಮಕೂರು ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಕೋಲಾರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಹೆಚ್ಚಾಗಿ ಹಾಗೂ ಉತ್ತರ ಕನ್ನಡ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಹರಡಿದೆ.

ಈ ಕೀಟ ನಿಯಂತ್ರಣ ಮಾಡಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ರಾಜ್ಯದ 11 ಜಿಲ್ಲೆಗಳಲ್ಲಿ ಪರೋಪಜೀವಿಗಳನ್ನು ವೃದ್ಧಿಪಡಿಸಿ ಬಾಧೆಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲು 50 ಪ್ರಯೋಗ ಶಾಲೆಗಳನ್ನು (45 ಸಣ್ಣ ಮತ್ತು 4 ದೊಡ್ಡವು ಜಿಲ್ಲಾಪರಿಷತ್ ಯೋಜನೆಯಡಿ ಮತ್ತು ಒಂದು ದೊಡ್ಡದು ರಾಜ್ಯವಲಯದಡಿ) ತೆರೆಯಲಾಗಿದ್ದೆ ಡಿಸೆಂಬರ್ 92ರ ಅಂತ್ಯದವರೆಗೆ 57.50 ಲಕ್ಷ ಪರೋಪಜೀವಿಗಳನ್ನು 2,703 ರೈತರುಗಳ ಕೀಟ ಬಾಧೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

2. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯ ಧನದೊಂದಿಗೆ 3 ಬೃಹತ್ ಪ್ರಮಾಣದ ಪರೋಪಜೀವಿ ವೃದ್ಧಿಪಡಿಸುವ ಪ್ರಯೋಗಶಾಲೆಗಳನ್ನು ತಿಪಟೂರು, ಉಡುಪಿ ಮತ್ತು ಹೊಸದುರ್ಗಗಳಲ್ಲಿ ಸ್ಥಾಪಿಸಿ

ಡಿಸೆಂಬರ್ 92ವರೆಗೆ 19.74 ಲಕ್ಷ ಪರೋಪಜೀವಿಗಳನ್ನು ಕೀಟಭಾದೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

3. ಕೀಟಬಾಧೆ ತೀವ್ರವಾದಾಗ ಬೇರಿನ, ಕಾಂಡದ ಮುಖಾಂತರ ಸಸ್ಯಾಂತರ ಮನೋಕ್ರೋಟೋಪಾಸ್ ಕೀಟನಾಶಕವನ್ನು ಶೇಕಡ 100ರ ರಿಯಾಯಿತಿ ದರದಲ್ಲಿ ಒದಗಿಸಿ 1.07 ಲಕ್ಷ ಮರಗಳನ್ನು ಡಿಸೆಂಬರ್ 92ರ ಅಂತ್ಯದವರೆಗೆ ಸಿಂಪಡಿಸಲಾಗಿದೆ.

4. 1991–92ನೇ ಸಾಲಿನಲ್ಲಿ ನಿರುದ್ಯೋಗಿ ಯುವಕ: ಯುವತಿಯರ ಸಹಕಾರದೊಂದಿಗೆ 125 ಖಾಸಗಿ ಪ್ರಯೋಗ ಶಾಲೆಗಳನ್ನು ತೆರೆಯಲಾಗಿದೆ. 1992–93ನೇ ಸಾಲಿನಲ್ಲಿ ಡಿಸೆಂಬರ್ 92ರ ಅಂತ್ಯದವರೆಗೆ 33.01 ಲಕ್ಷ ಪರೋಪಜೀವಿಗಳನ್ನು ಖಾಸಗಿಯವರಿಂದ (ನೂರಕ್ಕೆ ರೂ. 6–00ರಂತೆ) ಪಡೆದು ಇಲಾಖೆಯ ಸಿಬ್ಬಂದಿ ಮುಖಾಂತರ ರೈತರ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

5. ರಾಜ್ಯವಲಯದಡಿ 28 (24 ಸಣ್ಣ ಹಾಗೂ 4 ದೊಡ್ಡ) ಪ್ರಯೋಗ ಶಾಲೆಗಳನ್ನು ತೆರೆಯಲು ಏರ್ಪಾಡು ಮಾಡಲಾಗಿದೆ. ಈ ಯೋಜನೆಯಡಿ ವಾರ್ಷಿಕ 20.00 ಲಕ್ಷ ಪರೋಪಜೀವಿಗಳನ್ನು ಉತ್ಪಾದಿಸುವ ಗುರಿಯಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಜನವರಿ 92ರಿಂದ ಡಿಸೆಂಬರ್ 92ರವರೆಗೆ ಖರೀದಿ ಮಾಡಿದ ವಿವಿಧ ರಸಗೊಬ್ಬರಗಳ ಪ್ರಮಾಣ

342 (1024): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಜನವರಿ 92ರಿಂದ ಡಿಸೆಂಬರ್ 92ರವರೆಗೆ ಖರೀದಿ ಮಾಡಿದ ವಿವಿಧ ರಸಗೊಬ್ಬರಗಳ ಪ್ರಮಾಣ ಎಷ್ಟು ?

ಆ) ಈ ರಸಗೊಬ್ಬರಗಳನ್ನು ಖರೀದಿ ಮಾಡಿದ ಕಂಪನಿಗಳ ಹೆಸರುಗಳೇನು ?

ಇ) ಒಂದೊಂದು ಕಂಪನಿಗೆ ಸಂದಾಯ ಮಾಡಲಾದ ಹಣ ಎಷ್ಟು ?

ಈ) ಮೇಲ್ಕಾಣಿಸಿದ ಅವಧಿಯಲ್ಲಿ ಇದ್ದ ರಸಗೊಬ್ಬರದ ಒಟ್ಟು ಬೇಡಿಕೆ ಎಷ್ಟು ?

ಉ) ದೊಡ್ಡ ಮೊತ್ತದ ರಸಗೊಬ್ಬರ ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) 2,98,625 ಮೆಟ್ರಿಕ್ ಟನ್.

ಆ) ಅನುಬಂಧ (ಅ)ನಲ್ಲಿ ನೀಡಲಾಗಿದೆ.

ಇ) ಅನುಬಂಧ (ಆ) ದಲ್ಲಿ ನೀಡಲಾಗಿದೆ.

ಈ) 4,98,885 ಮೆಟ್ರಿಕ್ ಟನ್.

ಉ) ಹೌದು